**KAMS**510011842015

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 18 ನೇ ಮೇ , 2026**

**ಸಿ.ಸಿ./404/2015**

ಪಿರ್ಯಾದುದಾರರು ರಾಜ್ಯದ ಪರವಾಗಿ
ಬದನವಾಳು ಠಾಣಾ ಪೊಲೀಸರು.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು

1. ಮಾದೇಗೌಡ ಬಿನ್ ಲೇಟ್ ಮಾದೇಗೌಡ (ಮೃತಪಟ್ಟಿರುತ್ತಾರೆ)
2. ಸೋಮಣ್ಣ ಬಿನ್ ಮಾದೇಗೌಡ 45 ವರ್ಷ

3 ಬಸವರಾಜು ಬಿನ್ ಮಾದೇಗೌಡ 42 ವರ್ಷ
ವಾಸಃ ಮರಡಿಹುಂಡಿ ಗ್ರಾಮ, ನಂಜನಗೂಡು ತಾಲ್ಲೂಕು

(ಪ್ರತಿನಿಧಿಸುವವರುಃ **ಶ್ರೀ.ಕೆ ಜಿ ಕೆ .,** ವಕೀಲರು)

# -:: ತೀರ್ಪು ::-

ಬದನವಾಳು ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆರೋಪಿತರ ವಿರುದ್ಧ ದಾಖಲು ಮಾಡಿ, ಆರೋಪಿತರು ಭಾರತ ದಂಡ ಸಂಹಿತೆಯ ಕಲಂ. 323,324,504 ಮತ್ತು 506-ಬಿ ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-**

ದಿನಾಂಕಃ20.04.2014 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣಾ ವ್ಯಾಪ್ತಿ ಮರಡಿಹುಂಡಿ ಗ್ರಾಮದ ಬಳಿಯಿರುವ ತುಂನೇರಳೆ ಎಲ್ಲೆಗೆ ಸೇರಿದ ಸರ್ವೇ ನಂಬರ್ 101/102 ರ ಜಮೀನಿನಲ್ಲಿ ಪಿರ್ಯಾದಿಯವರು ಜಮೀನಿನ ಬಳಿ ಹೋದಾಗ ಆರೋಪಿಗಳು ಸಮಾನ ಉದ್ದೇಶದಿಂದ ಸ್ವಯಾರ್ಜಿತ ಜಮೀನಾದ ಪಿರ್ಯಾದಿಯವರ ಜಮೀನಿಗೆ ಉಳುಮೆ ಮಾಡಲು ಏರನ್ನು ಕಟ್ಟಿದ್ದಾಗ ಪಿರ್ಯಾದಿಯವರು ತಮ್ಮ ಜಮೀನಗೆ ಏಕೆ ಏರನ್ನು ಕಟ್ಟಿದ್ದೀಯಾ ಎಂದು ಕೇಳಿದಾಗ, 1ನೇ ಆರೋಪಿಯು ನಿಮ್ಮಪ್ಪನದ ಜಮೀನು ಸೂಳೆ ಮಗನೆ, ಬೋಳಿ ಮಗನೆ ಎಂದು ಬೈಯ್ಯುತ್ತಾ ಕೈಲಿದ್ದ ಮಚ್ಚನಿಂದ ಪಿರ್ಯಾದಿಯವರ ತಲೆಗೆ ಹೊಡೆದು ಗಾಯಗೊಳಿಸಿದ್ದು 2ನೇ ಆರೋಪಿಯು ದೊಣ್ಣೆಯಿಂದ ಪಿರ್ಯಾದಿಯವರ ಎರಡು ತೋಳುಗಳಿಗೆ, ಬೆನ್ನಿಗೆ ಸೊಂಟಕ್ಕೆ ಹೊಡೆದುದಲ್ಲದೆ 3ನೇ ಆರೋಪಿಯು ಕೈಯಿಂದ ಮೈ ಮೇಲೆ ಗುದ್ದಿ ನೋವುಂಟು ಮಾಡಿ ಸಾಮಾನ್ಯ ಸ್ವರೂಪದ

ಗಾಯಗೊಳಿಸಿದಲ್ಲದೆ, 1ನೇ ಆರೋಪಿಯು ಮತ್ತೇ ಜಮೀನಿಗೆ ತಂಟೆಗೆ ಬಂದರೆ ಮುಗಿಸಿ ಬಿಡುತ್ತೇನೆಂದು ಮಚ್ಚನ್ನು ತೋರಿಸಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಬದನವಾಳು ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣೆ ಪತ್ರ ಸಲ್ಲಿಕೆಯಾದ ನಂತರದಲ್ಲಿ ನ್ಯಾಯಾಲಯವು ಭಾ.ದಂ.ಸಂಹಿತೆ ಕಲಂ. 323,324,504 ಮತ್ತು 506-ಬಿ ಸಹವಾಚಕ ಕಲಂ.34 ಕ್ಕೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದೋಷಾರೋಪಣ ಪತ್ರ ಸಲ್ಲಿಕೆಯಾದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರಡಿಯಲ್ಲಿ ಅವಶ್ಯವಿರುವ ಕಟ್ಟೆ ದಾಖಲೆಗಳನ್ನು ಆರೋಪಿತರಿಗೆ ಒದಗಿಸಲಾಯಿತು. ಅಭಿಯೋಜನೆ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಕೇಳಿದ ನಂತರ ದೋಷಾರೋಪಣೆಯನ್ನು ತಯಾರು ಮಾಡಿ ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷ್ಯ ವಿಚಾರಣಾ ಕಾಲದಲ್ಲಿ 1ನೇ ಆರೋಪಿತರು ಮೃತಪಟ್ಟಿದ್ದು, ಅವರ ವಿರುದ್ಧದ ಪ್ರಕರಣವನ್ನು ಕೊನೆಗಾಣಿಸಲಾಗಿರುತ್ತದೆ.

4. ಅಭಿಯೋಜನೆಯವರ ಪರವಾಗಿ ದೋಷಾರೋಪಣಾ ಪತ್ರದಲ್ಲಿ ತೋರಿಸಿರುವ 9 ಜನ ಸಾಕ್ಷಿದಾರರ ಪೈಕಿ 7 ಜನ ಸಾಕ್ಷಿದಾರರನ್ನು ವಿಚಾರಿಸಿಕೊಂಡು, 6 ದಾಖಲಾತಿಗಳನ್ನು

ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿರುತ್ತದೆ.

5. ಸಾಕ್ಷ್ಯ ವಿಚಾರಣೆ ಮುಗಿದ ನಂತರದಲ್ಲಿ, ಆಪಾದಿತರ ವಿರುದ್ಧ ಬಂದಂತಹ ಸಾಕ್ಷ್ಯವನ್ನು ದಂ.ಪ್ರ.ಸಂಹಿತೆ ಕಲಂ.313 ರಡಿಯಲ್ಲಿ ಮಾಡಿಕೊಳ್ಳಲಾದ ಅವರುಗಳ ಹೇಳಿಕೆಯಲ್ಲಿ ಆರೋಪಿತರು ಸಂಪೂರ್ಣವಾಗಿ ನಿರಾಕರಣೆ ಮಾಡಿರುತ್ತಾರೆ. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಿಸಿಕೊಂಡಿರುವುದಿಲ್ಲ.

6. ಉಭಯ ಪಕ್ಷಗಾರರ ಪರ ವಾದ ಕೇಳಲಾಯಿತು.

7. ಆರೋಪಿತರು ಎಸಗಿದ್ದಾರೆ ಎನ್ನಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿದೆ.

## ಅಂಶಗಳು

1. ದಿಃ 20.04.2014 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಮರಡಿಹುಂಡಿ ಗ್ರಾಮದ ಸರ್ವೇ ಸಂಃ101/102 ರ ಜಮೀನಿನಲ್ಲಿ ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ ಜಗಳ ತೆಗೆದು, ಆ ಪೈಕಿ 1ನೇ ಆರೋಪಿಯು ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತಾರೆ. ಆದ್ದರಿಂದ ಆರೋಪಿತರು

ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

2. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1ನೇ ಆರೋಪಿತರು ಮಚ್ಚಿನಿಂದ ಚಾಸಾ.1 ರವರ ತಲೆಗೆ ಹೊಡೆದಿರುತ್ತಾರೆ, 2ನೇ ಆರೋಪಿತರು ದೊಣ್ಣೆಯಿಂದ ಚಾಸಾ.1 ರವರ 2 ತೋಳುಗಳಿಗೆ, ಬೆನ್ನಿಗೆ, ಸೊಂಟಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

3. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 3ನೇ ಆರೋಪಿಯು ಕೈಯಿಂದ ಚಾಸಾ.1 ರವರ ಮೈಗೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

4. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1ನೇ ಆರೋಪಿಯು ಮಚ್ಚನ್ನು ತೋರಿಸಿ ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತಾರೆ.

ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

5. ಮಾಡುವ ಆದೇಶ ಏನು?

8. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ-1 ರಿಂದ 4 :ನಕಾರಾತ್ಮಕವಾಗಿ.**
**ಅಂಶ-5 : ಅಂತಿಮ ಆದೇಶದಂತೆ.**
**ಈ ಕೆಳಕಂಡ ಕಾರಣಗಳಿಂದ:**

**ಕಾರಣಗಳು**

**9. ಅಂಶ 1 ರಿಂದ 4 :-** ಈ ಎಲ್ಲಾ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಹಲವು ಅಪರಾಧಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದಲೂ ಮತ್ತು ಅವುಗಳಿಗೆ ನೀಡಲಾಗುವ ಕಾರಣಗಳು ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

10. ಈ ಪ್ರಕರಣದಲ್ಲಿ ಅಭಿಯೋಜನೆಯವರು ಚಾಸಾ.1 ರವರು ಪಿರ್ಯಾದುದಾರಾಗಿದ್ದು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರಾಸಾ.1 ಎಂದು, ಚಾಸಾ.3 ಮತ್ತು 4 ರವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಸ್ಥಳ ಮಹಜರ್ ಸಾಕ್ಷಿದಾರರಾಗಿದ್ದು, ಕೃತ್ಯದ ಬಗ್ಗೆ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರಾಸಾ.2 ಮತ್ತು 5 ಎಂದು, ಚಾಸಾ.6 ಇವರು

ವೈದ್ಯಾಧಿಕಾರಿಯಾಗಿದ್ದು ,ಇವರನ್ನು ಪ್ರಾಸಾ.7 ಎಂದು, ಚಾಸಾ.7 ರಿಂದ 9 ರವರು ಭಾಗಶಃ ತನಿಖೆಯ ಬಗ್ಗೆ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರಾಸಾ.4,6 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಲಾಗಿದೆ.

11. ಪ್ರಾಸಾ-1-ಸಿದ್ದೇಗೌಡ ಉ.ಚಿಕ್ಕಸಿದ್ದೇಗೌಡ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರು ಗೊತ್ತು, ಚಾಸಾ 2 ರಿಂದ 5 ಗೊತ್ತು, ಈಗ್ಗೆ ಮೂರು ವರ್ಷಗಳ ಹಿಂದೆ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ತಾನು ತಮ್ಮ ಹೊಲದಲ್ಲಿದ್ದಾಗ ಚಾಸಾ.2 ಮತ್ತು 5 ರವರು ಅಲ್ಲಿಗೆ ಬಂದಿದ್ದರು. ನಮ್ಮದು ಹಾಗೂ ಆರೋಪಿತರದು ಒಂದೇ ಜಮೀನು. 2 ನೇ ಆರೋಪಿ ತಮ್ಮ ಜಮೀನನ್ನು ಉಳುತ್ತಿದ್ದ. 2 ನೇ ಆರೋಪಿ ಜೊತೆಗೆ ಅವರ ತಂದೆ ಒಂದನೇ ಆರೋಪಿ ಮಾದೇಗೌಡ ಹಾಗೂ ಮೂರನೇ ಆರೋಪಿ ಬಸವರಾಜು ಇದ್ದರು. ಒಂದನೇ ಆರೋಪಿ ಮಚ್ಚಿನಿಂದ ತಲೆಗೆ ಹೊಡೆದ. 2 ನೇ ಆರೋಪಿ ಸೋಮಣ್ಣ ದೊಣ್ಣೆಯಿಂದ ಎಡ ಕೈ ತೋಳಿಗೆ, ಬೆನ್ನಿಗೆ ಹಾಗೂ ಸೊಂಟಕ್ಕೆ ಹೊಡೆದ. 3 ನೇ ಆರೋಪಿ ಬಸವರಾಜು ಕೈನಿಂದ ತೋಳಿಗೆ, ಮೈಕೈಗೆ ಹೊಡೆದ. ಜಗಳವನ್ನು ಚಾಸಾ 5 ಪುಟ್ಟಣ್ಣರವರು ಬಿಡಿಸಿದರು. ಚಾಸಾ 2 ಸಿದ್ದರಾಜುರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು. ಪೊಲೀಸರು ಆಸ್ಪತ್ರೆಯಲ್ಲಿ ತನ್ನ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ. ಆರೋಪಿತರು ಜಮೀನಿನ ವಿಚಾರವಾಗಿ ತನ್ನೊಂದಿಗೆ ಗಲಾಟೆ ಮಾಡಿರುತ್ತಾರೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ತಾನು ಆರೋಪಿತರನ್ನು ತಮ್ಮ ಜಮೀನನ್ನು ಏಕೆ ಉಳುತ್ತಿದ್ದೀರಾ ಅಂತ ಕೇಳಿದ್ದಕ್ಕೆ ಒಂದನೇ ಆರೋಪಿ ಮಾದೇಗೌಡ ತನಗೆ ಬೋಳಿಮಗನೆ, ಸೂಳೆಮಗನೆ ಅಂತ ಅವಾಚ್ಯ ಶಬ್ದಳ್ಳಿದ ಬೈದಿರುತ್ತಾನೆ ಎಂದರೆ ಸರಿ, ಒಂದನೇ ಆರೋಪಿ ಮಾದೇಗೌಡ ಮಚ್ಚನ್ನು ಕೈಯಲ್ಲಿ ಹಿಡಿದುಕೊಂಡು ಜಮೀನಿನ ವಿಚಾರಕ್ಕೆ ಬಂದರೆ ನಿನ್ನನ್ನು ಕೊಲೆ ಮಾಡುತ್ತೇನೆ ಅಂತ ಬೆದರಿಕೆ

ಹಾಕಿರುತ್ತಾನೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

12. ಪ್ರಾಸಾ.3 - ಪೂಣಚ್ಚ ಎನ್ ಎಂ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22.04.2014 ರಂದು ತಾನು ಈ ಕೇಸಿನ ಕಡತವನ್ನು ಚಾಸಾ-8 ರವರಿಂದ ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ 12.05.2014 ರಂದು ಗಾಯಾಳು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದಿರುತ್ತೇನೆ. ದಿನಾಂಕ 22.05.2014 ರಂದು ಸರ್ವೆ ನಂಬರ್ 101 ಮತ್ತು 102/1 ರ ಪಹಣಿ ಪತ್ರಿಕೆಗಳನ್ನು ತಾಲ್ಲೂಕು ಕಛೇರಿಯಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿನಾಂಕ 23.05.2014 ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡು ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾದಾರ ಇದ್ದುದರಿಂದಾಗಿ ಅವರುಗಳ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.

13. ಪ್ರಾಸಾ-4-ಶಿವಣ್ಣ ಬಿ ವೈ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.04.2014 ರಂದು ತಮ್ಮ ಠಾಣೆಯ ಪಿ.ಎಸ್.ಐ ರವರು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ದಾಖಲಾಗಿದ್ದ ಚಾಸಾ-1 ರವರ ಹೇಳಿಕೆಯನ್ನು ಪಡೆದು ಕೊಂಡು ಬರುವಂತೆ ತನ್ನನ್ನು ನೇಮಕ ಮಾಡಿದ್ದರ ಮೇರೆಗೆ ತಾನು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾ-1 ರವರ ಹೇಳಿಕೆಯನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯರ ಸಮಕ್ಷಮ ಮಧ್ಯಾಹ್ನ 1.00 ರಿಂದ 2.00 ರವರೆಗೆ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಮಧ್ಯಾಹ್ನ 3.15 ಗಂಟೆಗೆ ಠಾಣೆಗೆ ಹೋಗಿ ಪಡೆದ ಚಾಸಾ-1 ರವರ ಹೇಳಿಕೆಯನ್ನು ಚಾಸಾ-8 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ.

14. ಪ್ರಾಸಾ-6-ಶ್ರೀ.ಕೋಟೇಗೌಡ ಹೆಚ್ ಎನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.04.2014 ರಂದು ಮದ್ಯಾಹ್ನ 3.15 ಗಂಟೆಗೆ ತಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ-7 ರವರು ತಂದು ಹಾಜರುಪಡಿಸಿದ ಚಾಸಾ-1 ರವರ ಹೇಳಿಕೆಯನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 96/2014 ರಲ್ಲಿ ಭಾ.ದಂ.ಸಂ.ಕಲಂ 323, 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ 21.04.2014 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಗ್ಗೆ 10.15 ರಿಂದ 11.00 ರವರೆಗೆ ಸ್ಥಳ ಮಹಜರ್ ಜರುಗಿಸಿ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಒಂದು ಕಬ್ಬಿಣದ ಮಚ್ಚು, ಒಂದು ಎರಡು ಅಡಿ ಉದ್ದದ ಬಿದಿರು ದೊಣ್ಣೆ ಮತ್ತು ಕೃತ್ಯ ನಡೆದ ದಿನ ಚಾಸಾ 1 ರವರು ಧರಿಸಿದ್ದ ಎಂದು ತುಂಬು ತೋಳಿನ ರಕ್ತದ ಕಲೆಯಾಗಿದ್ದ ಬಿಳಿಯ ಅಂಗಿಯನ್ನು ಚಾಸಾ 2 ರವರು ಹಾಜರು ಪಡಿಸಿದ ಮೇರೆಗೆ ಅಮಾನತ್ತು ಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 69/14 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-2 ಮತ್ತು ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

15. ಪ್ರಾಸಾ-7-ಡಾ.ವಿಜಯನರಸಿಂಹ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.04.2014 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಈ ಪ್ರಕರಣದ ಗಾಯಾಳು ಚಾಸಾ-1 ರವರು ಹಲ್ಲೆ ಇತಿಹಾಸದಲ್ಲಿ ಚಿಕಿತ್ಸೆಗಾಗಿ ತಮ್ಮ ಆಸ್ಪತ್ರೆಗೆ ಬಂದಾಗ ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಎಡ ಮತ್ತು ಬಲ ಮುಂಗೈ  ನಲ್ಲಿ 5*5 ಸೆಂಟಿಮೀಟರ್ ಅಳತೆಯ ಊತದ ಗಾಯ (Contusion on Left and Right Forearm measuring about 5*5 cm Blackening)

2. ತಲೆಯ ಮೇಲೆ 2*1/2 ಸೆಂಟಿಮೀಟರ್ ಅಳತೆಯ ರಕ್ತಸ್ರಾವದಿಂದ ಕೂಡಿದ ಹರಿದ ಗಾಯ (Lacerated wound over Vertex about 2*1/2 cm fresh bleeding)

ತನ್ನ ಅಭಿಪ್ರಾಯದಲ್ಲಿ ಈ ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಮೇಲ್ಕಂಡ ಗಾಯಗಳು ಮಚ್ಚು ಮತ್ತು ದೊಣ್ಣೆಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

16. ಚಾಸಾ.1 ರವರು ಈ ಪ್ರಕರಣದ ಪಿರ್ಯಾದುದಾರರಾಗಿದ್ದು, 1 ನೇ ಆರೋಪಿ ತನ್ನ ಅಣ್ಣ ಹಾಗೂ 2 ಮತ್ತು 3 ನೇ ಆರೋಪಿಗಳು ತನ್ನ ಅಣ್ಣನ ಮಕ್ಕಳು ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ತನ್ನ ಹಾಗೂ ಆರೋಪಿಗಳ ನಡುವೆ ಸಿವಿಲ್ ವ್ಯಾಜ್ಯಗಳು ನಡೆಯುತ್ತಿವೆ ಎಂದು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಮೇಲಾಗಿ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಮಹಜರ್ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಪಿರ್ಯಾದಿ ಮತ್ತು ಆರೋಪಿಗಳ ನಡುವೆ ಈಗಾಗಲೇ ಸಿವಿಲ್ ವ್ಯಾಜ್ಯಗಳು ಬಾಕಿ ಇದ್ದು, ಸದರಿ ದ್ವೇಷದಿಂದ ಆರೋಪಿಗಳ ಮೇಲೆ

ಪಿರ್ಯಾದುದಾರರು ದೂರು ನೀಡಿರಬಹುದು ಎಂಬ ಸಂಶಯ ಮೂಡಿ ಬರುತ್ತದೆ.

17. ಉಳಿದಂತೆ ಪ್ರಾಸಾ.3, 6 ರವರು ಈ ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ಈ ಪ್ರಕರಣದಲ್ಲಿ ತಾವು ಕೈಗೊಂಡ ತನಿಖೆಯ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ.7 ರವರು ಈ ಪ್ರಕರಣದಲ್ಲಿ ವೈದ್ಯಾಧಿಕಾರಿಗಳಾಗಿದ್ದು, ತಾವು ಚಿಕಿತ್ಸೆ ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

18. ಆದ್ದರಿಂದ ಪ್ರಾಸಾ.1 ರವರ ವಿಚಾರಣೆಗೆ ಪೂರಕವಾದ ಇತರೇ ಯಾವುದೇ ಸ್ವತಂತ್ರ ಸಾಕ್ಷಿದಾರರು ಅಭಿಯೋಜನೆಗೆ ಪೂರಕದವಾದ ಸಾಕ್ಷ್ಯ ನುಡಿದಿರುವುದಿಲ್ಲ. ಒಟ್ಟಾರೆಯಾಗಿ ಮೇಲಿನ ಎಲ್ಲಾ ಸಾಕ್ಷ್ಯವನ್ನು ತುಲನೆ ಮಾಡಿ ನೋಡಿದಾಗ, ಆರೋಪಿಗಳ ವಿರುದ್ದ ಅಭಿಯೋಜನೆ ಆರೋಪ ಮಾಡಿದಂತ ಯಾವುದೇ ಆರೋಪ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ, ಆರೋಪಿತರ ವಿರುದ್ಧ ಆಪಾದಿಸಲಾದ ದೋಷಾರೋಪಣೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆಂದು ನಿರ್ಣಯಿಸಿ **ಅಂಶ-1 ರಿಂದ 4** ನ್ನು **ನಕಾರಾತ್ಮಕವಾಗಿ ಉತ್ತರಿಸುತ್ತೇನೆ.**

19. **ಅಂಶ-5:-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಲಾಗಿರುವಂತಹ ದೋಷಾರೋಪಣೆಗಳನ್ನು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**-:: ಆದೇಶ ::-**

ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಅವರ ವಿರುದ್ಧ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ.323,324,504 ಮತ್ತು 506-ಬಿ ಸಹವಾಚಕ ಕಲಂ.34 ರಡಿಯಲ್ಲಿನ ದೋಷಾರೋಪಣೆಗಳಿಂದ **ಖುಲಾಸೆ ಮಾಡಿ ಬಿಡುಗಡೆ ಮಾಡಲಾಗಿದೆ.**

ಆರೋಪಿತರ ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ.ಕಲಂ.437-ಎ ರಂತೆ ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್.ನಂ.69/2014(ಪಿ.ಆರ್.ಸಂಃ215/2015), ದಿಃ21.04.2014 ಕ್ರಮ ಸಂಃ 1 ರಲ್ಲಿ ನಮೂದಿಸಿರುವ ಒಂದು ಕಬ್ಬಿಣದ ಮಚ್ಚನ್ನು ಮೇಲ್ಮನವಿ ಅವಧಿ ಮುಗಿದ ಮುಟ್ಟುಗೋಲು ಹಾಕಿಕೊಳ್ಳಲು ಕಚೇರಿಯವರಿಗೆ ಆದೇಶಿಸಲಾಗಿದೆ. ಕ್ರಮ ಸಂಃ 2 ರಲ್ಲಿ ನಮೂದಿಸಿರುವ 2 ಅಡಿ ಉದ್ದದ ಬಿದಿರು ದೊಣ್ಣೆ ಮತ್ತು ಕ್ರಮ ಸಂಃ 3 ರಲ್ಲಿ ನಮೂದಿಸಿರುವ ಒಂದು ಶರ್ಟು ನಿಷ್ಪ್ರಯೋಜಕ ಮತ್ತು ಮೌಲ್ಯರಹಿತ ವಸ್ತುಗಳಾಗಿರುವುದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಯವರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **18 ನೇ ಮೇ, 2026** ರಂದು ಆದೇಶವನ್ನು ಘೋಷಿಸಲಾಯಿತು)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು

## -ಅನುಬಂಧ-

**1. ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

| | | |
|---|---|---|
| ಪ್ರಾಸಾ-1 | : | ಸಿದ್ದೇಗೌಡ ಉ.ಚಿಕ್ಕಸಿದ್ದೇಗೌಡ |
| ಪ್ರಾಸಾ-2 | : | ಮಹದೇವ |
| ಪ್ರಾಸಾ-3 | : | ಪೂಣಚ್ಚ ಎನ್ ಎಂ |
| ಪ್ರಾಸಾ-4 | : | ಶಿವಣ್ಣ ಬಿ ವೈ |
| ಪ್ರಾಸಾ-5 | : | ಬಸವರಾಜು |
| ಪ್ರಾಸಾ-6 | : | ಕೋಟೇಗೌಡ ಹೆಚ್ ಎನ್ |
| ಪ್ರಾಸಾ-7 | : | ಡಾ.ವಿಜಯನರಸಿಂಹ |

**2. ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳು:**

| | | |
|---|---|---|
| ನಿಪಿ-1 | : | ದೂರುಹೇಳಿಕೆ |
| ನಿಪಿ-1(ಎ-ಬಿ) | : | ಸಹಿ |
| ನಿಪಿ-2 | : | ಸ್ಥಳ ಮಹಜರ್ |
| ನಿಪಿ-2(ಎ-ಬಿ ) | : | ಸಹಿಗಳು |
| ನಿಪಿ-3 | : | ಗಾಯದಪ್ರಮಾಣ ಪತ್ರ |
| ನಿಪಿ-3(ಎ-ಬಿ) | : | ಸಹಿ |
| ನಿಪಿ-4 | : | ಪಹಣಿ ಪತ್ರಿಕೆ |
| ನಿಪಿ-4(ಎ) | : | ಸಹಿ |
| ನಿಪಿ-5 | : | ಪಹಣಿ ಪತ್ರಿಕೆ |
| ನಿಪಿ-5(ಎ) | : | ಸಹಿ |
| ನಿಪಿ-6 | : | ಪ್ರಥಮ ವರ್ತಮಾನ ವರದಿ |
| ನಿಪಿ-6(ಎ ) | : | ಸಹಿ |

3. **ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳು:**

-ಇಲ್ಲಾ-

4. **ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

5. **ಆರೋಪಿತರ ಪರ ಗುರುತಿಸಲಾದ ದಾಖಲೆಗಳು:**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.